ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	486
ಸದಸ್ಯರ ಹೆಸರು	:	ಶ್ರೀ ಬಿ.ಕೆ.ಹರಿಪ್ರಸಾದ್
ಉತ್ತರಿಸುವ ದಿನಾಂಕ	:	24/09/2020
ಉತ್ತರಿಸುವ ಸಚಿವರು	:	ಮಾನ್ಯ ಗೃಹ ಸಚಿವರು

ಪ್ರಶ್ನೆ	ಉತ್ತರ
ಅ) ರಾಜ್ಯದ ಬಂದಿಖಾನೆಗಳ ಸಂಖ್ಯೆ ಎಷ್ಟು: ಅವಶ್ಯಕತೆಗಿಂತ ಹೆಚ್ಚು ಖೈದಿಗಳನ್ನು ತುಂಬಿರುವಂತಹ ಬಂದಿಖಾನೆಗಳು ಯಾವುವು.	ರಾಜ್ಯದಲ್ಲಿ ಪ್ರಸ್ತುತ ಒಟ್ಟು 47 ವಿವಿಧ ವರ್ಗದ ಬಂದಿಖಾನೆಗಳು ಕಾರ್ಯನಿರ್ವಹಿಸುತ್ತಿವೆ. ಈ ಕೆಳಕಂಡ ಕಾರಾಗೃಹಗಳಲ್ಲಿ ಅಧಿಕೃತ ಸಾಮರ್ಥ್ಯಕ್ಕಿಂತ ಹೆಚ್ಚು ಬಂದಿಗಳು ದಾಖಲಾಗಿರುತ್ತಾರೆ:- ➢ ಬೆಂಗಳೂರು, ವಿಜಯಪುರ, ಮೈಸೂರು, ಬಳ್ಳಾರಿ ಮತ್ತು ಕಲಬುರ್ಗಿ ಕೇಂದ್ರ ಕಾರಾಗೃಹಗಳು. ➢ ಚಾಮರಾಜನಗರ, ಕೋಲಾರ, ಹಾಸನ, ಮಂಗಳೂರು, ಹಾವೇರಿ, ಬೀದರ್, ಯಾದಗಿರಿ, ದಾವಣಗೆರೆ, ಕೊಪ್ಪಳ, ಚಿಕ್ಕಬಳ್ಳಾಪುರ ಜಿಲ್ಲಾ ಕಾರಾಗೃಹಗಳು ಮತ್ತು ಲಿಂಗಸೂಗೂರು ಉಪ ಕಾರಾಗೃಹ.
ಆ) ಬಂದಿಖಾನೆಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸುವುದು ಹಾಗೂ ಹೊಸ ಬಂದಿಖಾನೆಗಳನ್ನು ನಿರ್ಮಿಸಲು ಸರ್ಕಾರ ಯೋಚಿಸಿದೆಯೇ?	ಹೌದು. ಸರ್ಕಾರವು ಪ್ರತಿ ಆರ್ಥಿಕ ಸಾಲಿನ ಆಯವ್ಯಯದಲ್ಲಿ ಒದಗಿಸುವ ಅನುದಾನದಲ್ಲಿ, ಕಾರಾಗೃಹಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ. 2019-20ನೇ ಸಾಲಿನಲ್ಲಿ ಬೆಂಗಳೂರಿನಲ್ಲಿ ನೂತನ ಗರಿಷ್ಠ ಭದ್ರತಾ ಕಾರಾಗೃಹ, ವಿಜಯಪುರದಲ್ಲಿ ನೂತನ ಕೇಂದ್ರ ಕಾರಾಗೃಹ ಮತ್ತು ಅರಸೀಕೆರೆ ನೂತನ ತಾಲ್ಲೂಕು ಕಾರಾಗೃಹ ಹಾಗೂ 2020-21ನೇ ಸಾಲಿನಲ್ಲಿ ಬೀದರ್ ನೂತನ ಕೇಂದ್ರ ಕಾರಾಗೃಹ ನಿರ್ಮಾಣ ಯೋಜನೆಗೆ ಸರ್ಕಾರವು ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತದೆ.

ಸಂಖ್ಯೆ: ಹೆಚ್ ಡಿ 145 ಪಿಆರ್ ಎ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು